***<u>ಸಾಕ್ಷಿಯನ್ನು ದಿಃ 21.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಮುಂದುವರಿದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದಃ-</u>***

***ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಗಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.***

| | |
|---|---|
| *ನಿಪಿ.1* | *ಪ್ರಥಮ ವರ್ತಮಾನ ವರದಿ ಮತ್ತು ದೂರಿನ ದೃಢೀಕೃತ ನಕಲು* |
| *ನಿಪಿ.2* | *ಅಂತಿಮ ವರದಿಯ ದೃಢೀಕೃತ ನಕಲು* |
| *ನಿಪಿ.3* | *ಅಪಘಾತವಾದ ಸ್ಥಳದಲ್ಲಿ ಕಬ್ಜಾ ನಕ್ಷೆ* |
| *ನಿಪಿ.4* | *ಐಎಂವಿ ವರದಿಯ ದೃಢೀಕೃತ ನಕಲು* |
| *ನಿಪಿ.5* | *ಗಾಯದ ಪ್ರಮಾಣಪತ್ರದ ದೃಢೀಕೃತ ನಕಲು* |
| *ನಿಪಿ.6* | *ಬಿಡುಗಡೆಯ ಸಾರಾಂಶ* |
| *ನಿಪಿ.7* | *5 ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ* |
| *ನಿಪಿ.8* | *ಅರ್ಜಿದಾರರ ವ್ಯವಸ್ಥಾಪಕರು ದೃಢೀಕರಿಸಿದ ಬ್ಯಾಂಕ್ ಪಾಸ್ ಪುಸ್ತಕದ ಮೊದಲನೆ ಪುಟ* |
| *ನಿಪಿ.9* | *ಅರ್ಜಿದಾರರ ನೋಟರಿ ದೃಢೀಕೃತ ಪ್ಯಾನ್ ಕಾರ್ಡು* |
| *ನಿಪಿ.10* | *ಅರ್ಜಿದಾರರ ನೋಟರಿ ದೃಢೀಕೃತ ಅಧಾರ್ ಕಾರ್ಡು, ಎಂದು ಗುರುತಿಸಲಾಯಿತು.* |

*ನಿಪಿ.8 ರಿಂದ 10ರ ಅಸಲು ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಲಯ ಸ್ವತಃ ಪರಿಶೀಲನೆ ಮಾಡಿ ಮುಕ್ತ ನ್ಯಾಯಾಲಯದಲ್ಲಿ ಅರ್ಜಿದಾರರ ವಶಕ್ಕೆ ಹಿಂದಿರುಗಿಸಲಾಗಿರುತ್ತದೆ.*

***ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ***

*1.ಆ ದಿನ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದೆನು. ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಿಗೆ ಇಲ್ಲ. ಕೆಎ-09/ಹೆಚ್ ಯು-5720 ದ್ವಿಚಕ್ರ ವಾಹನ ಈ ಅಪಘಾತದಲ್ಲಿ ಒಳಗೊಂಡಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಪ್ಪಿನಿಂದ ಈ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ದೂರನ್ನು ನಾನೇ ಕೊಟ್ಟಿದ್ದೇನೆ. ಎರಡು ದಿನ ವಿಳಂಬವಾಗಿ ಪರಿಹಾರ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಕೆಎ-09/ಹೆಚ್ ಯು-5720 ವಾಹನದ ವಿರುದ್ಧ ದೂರು ನೀಡಿರುತ್ತೀರಾ ಎಂದರೆ ಸರಿಯಲ್ಲ. ಈ ಅಪಘಾತದಿಂದ ನಿಮಗೆ ತೀವ್ರ ಸ್ವರೂಪದ ಗಾಯಾಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಔಷಧಿ ಖರ್ಚಿಗಾಗಿ ರೂ.5 ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು ಜಯವರ್ದನ್. ನಿಮಗೆ ಯಾವುದೇ ಶಸ್ತ್ರ ಚಿಕಿತ್ಸೆಯಾಗಿಲ್ಲ ಎಂದರೆ ಸರಿಯಲ್ಲ. ಮತ್ತೊಂದು ಶಸ್ತ್ರ ಚಿಕಿತ್ಸೆ ಆಗಬೇಕೆಂದು ಪ್ರಮಾಣಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ. ವರ್ಷಕ್ಕೆ 300 ಟನ್ ಕಬ್ಬನ್ನು ಬೆಳೆಯುತ್ತೇವೆ.*

*2. ತಿಂಗಳಿಗೆ ರೂ.25 ಸಾವಿರ ಸಂಪಾದನೆ ಮಾಡುತ್ತಿದ್ದೆನು ಎಂದು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಸಿಗಲಿ ಎಂದು ತಿಂಗಳಿಗೆ ರೂ.25 ಸಾವಿರ ಆದಾಯ ಇಲ್ಲದೆ ಇದ್ದರೂ ಇದೆ ಎಂದು ಸುಳ್ಳು*

*ಹೇಳಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರು ಪಡಿಸಿರುತ್ತೀರಾ ಎಂದರೆ ಸರಿಯಲ್ಲ. ದಿಃ 01.01.1996 ನನ್ನ ಜನ್ಮ ದಿನಾಂಕವಾಗಿದೆ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***